ನಿಧಿ ಸುಬ್ಬಯ್ಯ ಮತ್ತೆ ಚಂದನವನಕ್ಕೆ ಮರಳಿದ್ದಾರೆ. ತಮ್ಮ ಪಾತ್ರಗಳ ಮೂಲಕವೇ ಜನರ ಮನಸ್ಸಲ್ಲಿ ಸದಾ ಉಳಿಯಬೇಕು ಎಂಬ ಹಂಬಲವಿರುವ ಈ ಬೆಡಗಿ, ಕನ್ನಡ ಸಿನಿಮಾಗಳ ಜೊತೆಜೊತೆಗೇ ಬಾಲಿವುಡ್‌ನಲ್ಲಿಯೂ ಮುಂದುವರಿಯುವ ನಿರ್ಧಾರ ಮಾಡಿದ್ದಾರೆ.

■ ಪದ್ಮನಾಭ ಭಟ್

# ಮತ್ತೆ ಬಂದ್ರು ಟುರ್ ಮೇಡಂ



'ಟುರ್.. ಚಿಕ್ಕೂಸ್..' ಎಂದು ತರ್ಲೆ ಮಾಡುತ್ತ ಕಾಟ ಕೊಡುವ 'ಪಂಚರಂಗಿ'ಯ ಕಿಲಾಡಿ ಹುಡುಗಿ ಯಾರಿಗೆ ನೆನಪಿಲ್ಲ? ಕಳೆದ ಮೂರು ವರ್ಷಗಳಿಂದ ಚಂದನವನದಿಂದ ಅಂತರ ಕಾಯ್ದುಕೊಂಡಿದ್ದ ಈ ಟುರ್ ಮೇಡಂ ಈಗ ಮತ್ತೆ ಎಂಟ್ರಿ ಕೊಡ್ತಿದ್ದಾರೆ. ಅದೂ ಶಿವರಾಜ್‌ಕುಮಾರ್ ಅವರಿಗೆ ಜೊತೆಯಾಗಿ 'ಆಯುಷ್ಮಾನ್ ಭವ' ಎಂಬ ಸಿನಿಮಾದ ಮೂಲಕ.

ಯಾರ ಬಗ್ಗೆ ಈ ಮಾತುಗಳು ಅಂತ ಇನ್ನೂ ತಿಳಿಯಲಿಲ್ಲವೇ? ಅಣ್ಣಾ ಬಾಂಡ್‌ನಲ್ಲಿ ಅಪ್ಪು ಜೊತೆ ರೊಮ್ಯಾನ್ಸ್ ಮಾಡಿ ಸೈ ಅನಿಸಿಕೊಂಡಿದ್ದ ಸಂಪಿಗೆ ಮೂಗಿನ ಚೆಲುವೆ ನಿಧಿ ಸುಬ್ಬಯ್ಯ ಸ್ಯಾಂಡಲ್‌ವುಡ್‌ಗೆ ರೀಎಂಟ್ರಿ ಕೊಟ್ಟಿದ್ದಾರೆ. ಹಾ, ಈ ರೀಎಂಟ್ರಿ ಆಗಿದ್ದು ಕಳೆದ ಫೆಬ್ರುವರಿಯಲ್ಲಿಯೇ. ನಿಧಿ ಮುಖ್ಯಪಾತ್ರದಲ್ಲಿ ನಟಿಸಿರುವ 'ಆಯುಷ್ಮಾನ್ ಭವ' ಸಿನಿಮಾ ಈಗ ಪೂರ್ಣಗೊಂಡಿದೆ. ನವೆಂಬರ್ 1ಕ್ಕೆ ಬಿಡುಗಡೆಯೂ ಆಗುತ್ತಿದೆ. ಈ ಚಿತ್ರದಲ್ಲಿ ನಿಧಿ, ಗ್ಲ್ಯಾಮರಸ್ ಹಳ್ಳಿ ಹುಡುಗಿಯಾಗಿ ನಟಿಸಿದ್ದಾರಂತೆ.

ಕಳೆದ ಕೆಲವು ವರ್ಷಗಳಿಂದ ಅವರು ಬಾಲಿವುಡ್‌ನಲ್ಲಿ ನೆಲೆಯೂರುವ ಪ್ರಯತ್ನದಲ್ಲಿದ್ದರು. 'ಮತ್ತೆ ಕನ್ನಡ ಚಿತ್ರರಂಗಕ್ಕೆ ಬಂದಿರುವುದು ನನಗೆ ತವರು ಮನೆಗೆ ಬಂದ ಹಾಗೆ ಅನಿಸುತ್ತಿದೆ. ನನಗೆ ಮೊದಲೇ ಪರಿಚಯವಿದ್ದವರ ಜೊತೆಗೆ ಕೆಲಸ ಮಾಡುತ್ತಿದ್ದೇನೆ. ಒಂಥರಾ ಹೋಮ್ಲೀ ಫೀಲ್ ಆಗ್ತಿದೆ' ಎನ್ನುತ್ತಾರೆ ಅವರು. 'ಇಷ್ಟು ವರ್ಷ ಯಾಕೆ ಕನ್ನಡ ಚಿತ್ರರಂಗದಿಂದ ದೂರವಿದ್ದಿರಿ' ಎಂದು ಕೇಳಿದರೆ 'ಒಳ್ಳೆಯ ಸ್ಕ್ರಿಪ್ಟ್‌ಗಾಗಿ ಕಾಯುತ್ತಿದ್ದೆ' ಎಂಬ ಸಿದ್ಧ ಉತ್ತರ ಅವರ ಬಳಿ ಇದೆ. ಹಾಗಾದರೆ ಒಳ್ಳೆಯ ಸ್ಕ್ರಿಪ್ಟ್ ಎಂದರೆ ಏನು? 'ಪಂಚತಂತ್ರ ಸಿನಿಮಾ ತೆರೆಕಂಡಿದ್ದು 2010ರಲ್ಲಿ. ಈಗ 2019. ಆದರೆ ಈಗಲೂ ನನ್ನನ್ನು ಪಂಚರಂಗಿಯ 'ಟುರ್ ಮೇಡಂ' ಎಂದೇ ಗುರ್ತಿಸುತ್ತಾರೆ. ಹೀಗೆ ಜನರು ನೆನಪಿಸಿಕೊಳ್ಳುವಂಥ ಪಾತ್ರದಲ್ಲಿ ನಟಿಸುವ ಆಸೆ ನನ್ನದು' ಎನ್ನುತ್ತಾರೆ ನಿಧಿ.

ಯಾವುದೇ ಸಿನಿಮಾ ಒಪ್ಪಿಕೊಳ್ಳಬೇಕಾದರೆ ಅವರು ಮೊದಲು, ತಾನು ಆ ಪಾತ್ರಕ್ಕೆ ನ್ಯಾಯ ಒದಗಿಸಬಲ್ಲೆನಾ ಎಂಬ ಪ್ರಶ್ನೆಯನ್ನು ತನಗೆ ತಾನೇ ಕೇಳಿಕೊಳ್ಳುತ್ತಾರಂತೆ. ನಂತರ ನಿರ್ದೇಶಕರು, ನಿರ್ಮಾಣ ಸಂಸ್ಥೆ, ನಾಯಕನಟ ಎಲ್ಲರೂ ಯಾರು ಎಂಬುದನ್ನು ಗಮನಿಸುತ್ತಾರೆ. ಈ ಎಲ್ಲ ಮಾನದಂಡಗಳಿಂದಲೂ 'ಆಯುಷ್ಮಾನ್ ಭವ' ಅವರಿಗೆ ಅದೃಷ್ಟದ ಅವಕಾಶವಾಗಿ ಕಂಡಿದೆ. 'ಈ ಮೊದಲು ನಾನು ಅಪ್ಪು ಜೊತೆ ನಟಿಸಿದ್ದೆ. ಈಗ ಶಿವಣ್ಣ ಅವರ ಜೊತೆ ನಟಿಸುತ್ತಿದ್ದೇನೆ. ಮೊದಲೇ 'ಮನಮೋಹಕ' ಸಿನಿಮಾದಲ್ಲಿ ಅವರ ಜೊತೆ ನಟಿಸಬೇಕಾಗಿತ್ತು. ಆದರೆ ಆ ಚಿತ್ರ ನಿಂತುಹೋಯಿತು. ಆ ಅವಕಾಶ ಈಗ ಸಿಕ್ಕಿದೆ. ನನಗಂತೂ ಸೆಟ್‌ನಲ್ಲಿ ಶಿವಣ್ಣ ಅವರ ಉತ್ಸಾಹ ನೋಡಿ ಇವರೇ ಶಿವಣ್ಣನಾ ಎಂಬ ಅನುಮಾನ ಬರ್ತಿತ್ತು' ಎಂದು ಬೆರಗಿನಿಂದ ನೆನಪಿಸಿಕೊಳ್ಳುತ್ತಾರೆ.

ದಾಂಪತ್ಯ ಜೀವನದಿಂದ ಹೊರಬಂದು ಮತ್ತೆ ಬಣ್ಣದ ಬದುಕಿನಲ್ಲಿಯೇ ನೆಮ್ಮದಿಯ ನೆಲೆಯನ್ನು ಕಂಡುಕೊಳ್ಳುತ್ತಿರುವ ನಿಧಿಗೆ ಹಿರಿಯ ನಟಿ ಲಕ್ಷ್ಮಿ ಅವರ ಬದುಕನ್ನು ಆಧರಿಸಿದ ಸಿನಿಮಾದಲ್ಲಿ ನಟಿಸುವ ಆಸೆ ಇದೆ. ತೆರೆಯ ಮೇಲೆ ಲಕ್ಷ್ಮಿಯಾಗಿ ನಟಿಸುವ ಅವಕಾಶ ಸಿಗಲಿ ಎಂದು ಪ್ರತಿದಿನ ದೇವರಲ್ಲಿ ಪ್ರಾರ್ಥಿಸುತ್ತಿದ್ದಾರೆ ಕೂಡ.

ಸದ್ಯಕ್ಕೆ ಹಿಂದಿ ವೆಬ್ ಸಿರೀಸ್ ಒಂದರಲ್ಲಿ ನಟಿಸಲು ಅವರು ಸಿದ್ಧರಾಗಿದ್ದು, ಕನ್ನಡದಲ್ಲಿಯೂ ಹಲವು ಕಥೆಗಳನ್ನು ಕೇಳುತ್ತಿದ್ದಾರೆ. 'ಕನ್ನಡದ ಜನರ ಪ್ರೀತಿಯನ್ನು ಬಿಟ್ಟು ಬೇರೆಲ್ಲಿಗೂ ಹೋಗಲಾರೆ' ಎಂದು ಭಾವುಕರಾಗಿಯೇ ನುಡಿಯುವ 'ಟುರ್ ಮೇಡಂ' ಕಮ್‌ಬ್ಯಾಕ್ ಅನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಕಾದು ನೋಡಬೇಕಷ್ಟೆ. ■